MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - THURSDAY 12-1-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಮಲೇಶಿಯನ್ ಪಾಮೆಣ್ಣೆ ರಫ್ತು ಇಳಿಕೆ ದರ ಕುಸಿತ

2023 ಜನವರಿ 1–10 ರ ತನಕ ಮಲೇಶಿಯಾದ ಪಾಮೆಣ್ಣೆ ರಫ್ತು ಹಿಂದಿನ ತಿಂಗಳ ಈ ಅವಧಿಗಿಂತ ಅರ್ಧಾಂಶ ಇಳಿಕೆಯಾಗಿ 235,529 ಟನ್‌ಗಳಾಗಿವೆಯೆಂದು ಕಾರ್ಗೋ ಸರ್ವರ್ AMSPA AGRI ಪ್ರಕಟಿಸಿದೆ. ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ ಡಿಸೆಂಬರ್ 23, 2022 ರ ನಂತರದಲ್ಲಿ ಕನಿಷ್ಠ ಮಟ್ಟಕ್ಕಿಳಿದು 3.55 ಶೇಕಡಾ 146 ರಿಂಗಿಟ್ಸ್ ಇಳಿಕೆ ಕಂಡು ಟನ್‌ಗೆ 3972 ರಿಂಗಿಟ್ಸ್ ($ 908.82) ಆಗಿದೆ. ಚೀನಾದ ದಲಿಯನ್ ಮಾರುಕಟ್ಟೆಯಲ್ಲಿ ಸೋಯಾಬೀನ್ ಎಣ್ಣೆ 1.9 ಶೇಕಡಾ ಹಾಗೂ ಪಾಮೆಣ್ಣೆ 3.1 ಶೇಕಡಾ ಇಳಿಕೆಯಾಗಿದೆ.

## ಆವಕ ಇಳಿಕೆಯಿಂದ ಬಿಹಾರದಲ್ಲಿ ಜೋಳ ದರ ಹೆಚ್ಚಳ

ಬಿಹಾರದ ಪುರ್ನಿಯಾ ಮಾರುಕಟ್ಟೆಯಲ್ಲಿ ಆವಕ ಇಳಿಕೆಯಿಂದ ಜೋಳ ದರ ಹೆಚ್ಚಳವಾಗಿದೆ. ಕರ್ನಾಟಕದ ದಾವಣಗೆರೆಯಲ್ಲಿ ಆವಕ ಇಳಿಕೆಯಿದ್ದರೂ ದರ ಸ್ಥಿರವಿದೆ. ಮುಂದಿನ ದಿನಗಳಲ್ಲಿ ಬಿಹಾರದಲ್ಲಿ ಆವಕ ಇನ್ನೂ ಇಳಿಕೆಯಾಗುವ ನಿರೀಕ್ಷೆಯಿದೆಯೆನ್ನಲಾಗಿದೆ. ಹೊಸ ಬೆಳೆಯ ಆವಕ ಎಪ್ರಿಲ್ ಪ್ರಥಮ ವಾರದಲ್ಲಿ ಆರಂಭವಾಗಬಹುದೆನ್ನಲಾಗಿದೆ. ರಾಬಿ ಬಿತ್ತನೆ 21.7 ಶೇಕಡಾ ಅಧಿಕವಾಗಿ 1.97 ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆಯೆನ್ನಲಾಗಿದೆ.

## 16.92 ಲಕ್ಷ ಟನ್ ಸಕ್ಕರೆ ಜನವರಿ 4, 2023 ರ ತನಕ ಭಾರತದಿಂದ ರಫ್ತು

2023 ಜನವರಿ 4, ರ ತನಕ ಭಾರತದಿಂದ (2022–23) 16.92 ಲಕ್ಷ ಟನ್ ಸಕ್ಕರೆ ರಫ್ತಾಗಿದೆಯೆನ್ನಲಾಗಿದೆ. ಬಾಂಗ್ಲಾ ದೇಶಕ್ಕೆ 1.47 ಲಕ್ಷ ಟನ್, ಶ್ರೀಲಂಕಾಕ್ಕೆ 82,462 ಟನ್ ಹಾಗೂ ಚೀನಾಕ್ಕೆ 59,596 ಟನ್ ಸಕ್ಕರೆ ರಫ್ತಾಗಿದೆಯೆನ್ನಲಾಗಿದೆ. ಇದಲ್ಲದೆ ಸೋಮಾಲಿಯಾಕ್ಕೆ 1.70 ಲಕ್ಷ ಟನ್, UAE 1.69 ಲಕ್ಷ ಟನ್, ಸೂಡಾನ್‌ಗೆ 1.37 ಲಕ್ಷ ಟನ್ ರಫ್ತಾಗಿದೆಯೆನ್ನಲಾಗಿದೆ. 1.36 ಲಕ್ಷ ಟನ್ ಮಲೇಶಿಯಾಗೆ, 1.18 ಲಕ್ಷ ಟನ್ ಇಂಡೋನೇಶಿಯಾಗೆ ಹಾಗೂ 1.08 ಲಕ್ಷ ಟನ್ ಸೌದಿ ಅರೇಬಿಯಾಗೆ ರಫ್ತಾಗಿದೆಯೆನ್ನಲಾಗಿದೆ. 2021–2022 ರ ರಫ್ತು 11.2 ಮಿಲಿಯನ್ ಟನ್‌ಗಳಾಗಿತ್ತೆನ್ನಲಾಗಿದೆ.